ಕಟ್ಟುವುದು ಮಾತ್ರವಲ್ಲದೆ, ಪರ್ಯಾಯ ಮಾಧ್ಯಮ ರೂಪಿಸಿಕೊಳ್ಳುವ ಜರೂರತ್ತನ್ನು ಮನಗಾಣಿಸಿತು. ಬೂಸಾ ಪ್ರಕರಣದ ಆರು ತಿಂಗಳ ನಂತರ ಮೈಸೂರಿನಲ್ಲಿ ಏರ್ಪಟ್ಟ 'ಕಲಾವಿದರ ಮತ್ತು ಬರಹಗಾರರ ಒಕ್ಕೂಟ'ದ ಕಾರ್ಯಕ್ರಮವು ಇದನ್ನು ಪ್ರತಿಫಲಿಸುತ್ತದೆ. ಅದರ ಕರಪತ್ರದಲ್ಲಿ 'ಸಾವಿರಾರು ವರ್ಷಗಳಿಂದ ಬೌದ್ಧಿಕ ದಬ್ಬಾಳಿಕೆ ನಡೆಸಿ, ಜನತೆಗೆ ತಿಳಿಯದ ಭಾಷೆ ಮೂಲಕ, ಆಡಳಿತ ಸೂತ್ರಗಳ ಮೂಲಕ, ನಮ್ಮ ಜನರನ್ನು ಮೂಕರನ್ನಾಗಿಸಿದ ಉಚ್ಚವರ್ಗದ ಹತೋಟಿಯಿಂದ ರೇಡಿಯೊ, ವೃತ್ತಪತ್ರಿಕೆ, ಚಲನಚಿತ್ರ, ಪುಸ್ತಕ ಪ್ರಕಾಶನ ಮುಂತಾದ ಸಮಷ್ಟಿ ಮಾಧ್ಯಮಗಳನ್ನು ಬಿಡುಗಡೆ ಮಾಡಲು ಹೋರಾಡುವ ಕಾಲ ಈಗ ಬಂದಿದೆ' ಎಂಬ ಹೇಳಿಕೆಯಿದೆ. ಇಂಥದೇ ನಿರ್ಣಯವನ್ನು ಮುಂದೆ ಭದ್ರಾವತಿಯಲ್ಲಿ ನಡೆದ 'ದಲಿತ ಲೇಖಕ ಕಲಾವಿದರ ಒಕ್ಕೂಟ'ವೂ ಮಾಡಿತು. ವಿಶೇಷವೆಂದರೆ, ಬೂಸಾ ಪ್ರಕರಣದಲ್ಲಿ 'ದಲಿತ'ಕ್ಕಿಂತ ಪಂಚಮ, ಹರಿಜನ, ಅತಿಶೂದ್ರ ಎಂಬ ಪರಿಭಾಷೆಗಳು ಪ್ರಧಾನವಾಗಿ ಬಳಕೆಯಾಗಿದ್ದು. ಮುಂದೆ ದಲಿತ ಸಂಘರ್ಷ ಸಮಿತಿಯು ತನ್ನ ಪತ್ರಿಕೆಗೆ 'ಪಂಚಮ' (1976) ಎಂದು ಹೆಸರಿಟ್ಟಿತು. ಇದು ಅಕ್ಷರ ಕಲಿತ ಮೊದಲ ತಲೆಮಾರಿನ ನೂರಾರು ಜನರಿಗೆ ತಮ್ಮ ಅನುಭವ ಹಂಚಿಕೊಳ್ಳುವ ವೇದಿಕೆಯೂ ಆಯಿತು.

## ಅಸಹನೆಯ ಅಭಿವ್ಯಕ್ತಿ

'ಬರಹಗಾರರ ಮತ್ತು ಕಲಾವಿದರ ಒಕ್ಕೂಟ' ಹಾಗೂ 'ದಲಿತ ಲೇಖಕ ಕಲಾವಿದರ ಒಕ್ಕೂಟ'ದಲ್ಲಿ ಬಿಬಿಯವರು ಮಾಡಿರುವ ಭಾಷಣಗಳನ್ನು, ಅವರು ಕೊಟ್ಟಿರುವ ಸಂದರ್ಶನಗಳನ್ನು ಗಮನಿಸಿದರೆ, ಸಾಹಿತ್ಯದ ವಿಷಯದಲ್ಲಿ ಅವರಿಗೆ ಸರಳೀಕೃತ ಗ್ರಹಿಕೆಗಳು ಇದ್ದುದು ಗೊತ್ತಾಗುತ್ತದೆ. ಅಂಬೇಡ್ಕರರನ್ನು ಆದರ್ಶವಾಗಿಸಿಕೊಂಡಿದ್ದರೂ ಅಂಬೇಡ್ಕರರ ಅಧ್ಯಯನದ ಬಲ ಮತ್ತು ಬೌದ್ಧಿಕತೆ ಅವರಲ್ಲಿರಲಿಲ್ಲ. ವಾಸ್ತವವಾಗಿ ಅವರು ಕನ್ನಡದ ಪಠ್ಯಪುಸ್ತಕಗಳನ್ನು ಉದ್ದೇಶಿಸಿ ಬೂಸಾ ಹೇಳಿಕೆ ಕೊಟ್ಟಿದ್ದರೇ ಹೊರತು, ಇಡೀ ಕನ್ನಡ ಸಾಹಿತ್ಯ ಕುರಿತಂತೆ ಅಲ್ಲ. ಹೀಗಾಗಿ ಅವರ ಪ್ರಾಸಂಗಿಕ ಹೇಳಿಕೆಗೆ ಬಂದ ಪ್ರತಿಕ್ರಿಯೆಗಳು ಉತ್ಪ್ರೇಕ್ಷಿತ ಮತ್ತು ದ್ವೇಷದ ನೆಲೆಯಲ್ಲಿದ್ದವು. ಅವರ ಹೇಳಿಕೆಯನ್ನು ವಿರೋಧಿಸಿದವರಲ್ಲಿ ಬಹುತೇಕರು ಸಾಹಿತ್ಯದ ಗಂಭೀರ ವಿದ್ಯಾರ್ಥಿಗಳಾಗಿರಲಿಲ್ಲ. ಆದರೆ, ದೇವರು ಧರ್ಮಗಳ ಬಗ್ಗೆ ಬಿಬಿಯವರು ಮಾಡುತ್ತಿದ್ದ ತೀಕ್ಷ್ಣವಾದ ಟೀಕೆಗಳು, ಸವರ್ಣೀಯರಿಗೆ ಧಾರ್ಷ್ಟ್ಯವಾಗಿ ತೋರಿದ್ದವು. ಮಂತ್ರಿಯಾಗಿ ಅವರು ಕೈಗೊಂಡಿದ್ದ ಸುಧಾರಣ ಕ್ರಮಗಳು ತಮ್ಮ ಸಾಮಾಜಿಕ ಯಜಮಾನಿಕೆಯನ್ನು ಕಳೆದುಬಿಡಬಹುದು ಎಂಬ ಗಾಬರಿ ಹುಟ್ಟಿಸಿದ್ದವು. ಹೀಗಾಗಿ ಬೂಸಾ ಹೇಳಿಕೆಯು ಅವರ ಸಂಚಿತ ಆತಂಕವನ್ನು ಹೊರಹಾಕಲು ಅವಕಾಶ ಕಲ್ಪಿಸಿತು. ಇದೇ ಕಾಲಕ್ಕೆ ಹಳ್ಳಿಗಳಲ್ಲಿ ದಲಿತರು ಮತ್ತು ಹಿಂದುಳಿದ ಸಮುದಾಯಗಳು ಆಧುನಿಕ ಶಿಕ್ಷಣ ಪಡೆದು, ಊರಿನ ಲಾಗಾಯ್ತಿನ ಸೇವೆಗಳನ್ನು ಮಾಡದೆ, ಅವರ ಯಜಮಾನಿಕೆಗೆ ಸವಾಲು ಹಾಕುವಂತೆ ಬದಲಾಗುತ್ತಿದ್ದರು; ಸಾರ್ವಜನಿಕ ಬದುಕಿನ ಬೇರೆಬೇರೆ ಕ್ಷೇತ್ರಗಳಲ್ಲಿ ಪ್ರವೇಶಿಸುತ್ತಿದ್ದರು. ಶಿಕ್ಷಣ ಉದ್ಯೋಗಗಳಲ್ಲಿ ತಮ್ಮ ಜತೆ ಸ್ಪರ್ಧಿಸುವಂತೆ ಬೆಳೆಯುತ್ತಿರುವ ದಲಿತರು, ಮುಂದೆ ತಮ್ಮ ಅವಕಾಶಗಳನ್ನು ಮೀಸಲಾತಿ ಮೂಲಕ ಕಸಿಯುವರು ಎಂಬ ಪರಿಭಾವನೆ ಸವರ್ಣೀಯ ವಿದ್ಯಾರ್ಥಿಗಳಿಗಿತ್ತು. ಅವರು ದಲಿತ ವಿದ್ಯಾರ್ಥಿಗಳನ್ನು ಕಾಲೇಜು ಆವರಣಗಳಲ್ಲಿ ಅಪಮಾನಿಸುತ್ತಿದ್ದರು; 'ಹಳ್ಳಿಗಳಲ್ಲಿ ಹೊಲ ಉಳುವವರೆಲ್ಲ ಕಾಲೇಜಿಗೆ ಬಂದಿದ್ದಾರೆ. ಅವರನ್ನು ಹಳ್ಳಿಗಳಿಗೆ ಅಟ್ಟಬೇಕು' ಎಂದು ಹೇಳುತ್ತಿದ್ದರು; ಕಪ್ಪು ಬಣ್ಣದವರನ್ನೆಲ್ಲ ದಲಿತರೆಂದು ಭಾವಿಸಿ ಪೆಟ್ಟುಕೊಡುತ್ತಿದ್ದರು. ದಲಿತ ಅಧ್ಯಾಪಕರು ತರಗತಿಗಳಲ್ಲಿ ಪಾಠ ಮಾಡುವುದಕ್ಕೆ ಕಿರುಕುಳ ಕೊಡಲಾಗುತ್ತಿತ್ತು ಎಂಬ ವರದಿಗಳಿದ್ದವು. ಮರಾಠವಾಡಾ ವಿಶ್ವವಿದ್ಯಾಲಯಕ್ಕೆ ಅಂಬೇಡ್ಕರ್ ಹೆಸರಿಡಬೇಕೆಂದು ದಲಿತರು ಬೇಡಿಕೆಯಿಟ್ಟಾಗ (1978), ಸವರ್ಣೀಯರು ಇದೇ ಮಾದರಿಯಲ್ಲಿ